

## ಅನುತ್ಪಾದಕ ಸಾಲ ವಸೂಲಿಗೆ ಅಡೆತಡೆ

# ಬಿಗಿ ಆಗ್ಬೇಕು ಕಾನೂನು

■ ಶ್ರೀಕಾಂತ್ ಶೇಷಾದ್ರಿ ಬೆಂಗಳೂರು

ಅತಿವೃಷ್ಟಿ, ಕರೊನಾ, ಮಾರುಕಟ್ಟೆಯಲ್ಲಿನ ವ್ಯತ್ಯಾಸಗಳು, ಕೀಟ ಬಾಧೆ, ರಾಜಕೀಯ ನಾಯಕರ ಸಾಲಮನ್ನಾ ಹೇಳಿಕೆ ಹೀಗೆ ವಿವಿಧ ಕಾರಣಗಳಿಂದ ರಾಜ್ಯದಲ್ಲಿ ಕೃಷಿ ಸಂಬಂಧಿ ಸಾಲಗಳು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದೆ. ಹಾಗೆಯೇ ಅನುತ್ಪಾದಕ ಸಾಲ ವಿಪರೀತ ಹೆಚ್ಚುತ್ತಿದ್ದು, ಅದನ್ನು ವಸೂಲಿ ಮಾಡುವುದು ಬ್ಯಾಂಕ್‌ಗಳಿಗೆ ತಲೆನೋವಾಗಿ ಪರಿಣಮಿಸುತ್ತಿದೆ.

ಬೆಳೆ ಸಾಲದ ಮೇಲಿನ ಮನ್ನಾ ಹೊರತಾಗಿಯೂ ರೈತರ ಮೇಲಿನ ಸಾಲದ ಭಾರ ಕಡಿಮೆಯಾದಂತೆ ಕಾಣಿಸುತ್ತಿಲ್ಲ. ಎನ್‌ಪಿಎ ಪ್ರಮಾಣ ಹೆಚ್ಚುವುದು ಒಂದು ಕಡೆಯಾದರೆ, ಸಾಲ ವಸೂಲಿಗೆ ನಿಧಾನಗತಿಯ ಧೋರಣೆ ಬ್ಯಾಂಕಿಂಗ್ ವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತಿದೆ. ಸದ್ಯ ಲಭ್ಯವಿರುವ ಮಾಹಿತಿ ಪ್ರಕಾರವೇ ನೋಡುವುದಾದರೆ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ 41 ಸಾವಿರಕ್ಕೂ ಮಿಕ್ಕಿದ ಎನ್‌ಪಿಎ ಪ್ರಕರಣ ಬಗೆಹರಿಯುವ ಹಂತ ದಾಟದೇ ಬಾಕಿಯಾಗಿದೆ. ಅಂದರೆ ಸಾಲ ಮರುಪಾವತಿಯೂ ಆಗುತ್ತಿಲ್ಲ, ವರ್ಷದಿಂದ ವರ್ಷಕ್ಕೆ ಈ ಪಟ್ಟಿಗೆ ಸೇರುವ ಸಂಖ್ಯೆಯೂ ಹೆಚ್ಚಾಗುತ್ತಿದೆ, ಸಮಸ್ಯೆ ಪರಿಹರಿಸಬೇಕಾದ ಪಾಲುದಾರರಾದ ಅಧಿಕಾರಿಗಳು ಸಹಕಾರ ನೀಡುತ್ತಿಲ್ಲ. ಈ ಬೆಳವಣಿಗೆ ಹಣಕಾಸು ಸಂಸ್ಥೆಗಳನ್ನು ಕಂಗಾಲು ಮಾಡಿದ್ದು, ಸರ್ಕಾರದ ನೆರವು ಬಯಸಿವೆ. ಕಳೆದ ಆರ್ಥಿಕ ವರ್ಷವೊಂದರಲ್ಲೇ 15,949 ಪ್ರಕರಣ ಸರ್ಕಾರದ ಹಂತದಲ್ಲಿ ಬಾಕಿಯಾಗಿರುವುದು ಕಂಡುಬಂದಿದೆ. ಹಿಂದಿನ ಮೂರು ವರ್ಷಕ್ಕೆ ಹೋಲಿಸಿದರೆ 2020-21ರ ಒಂದೇ ವರ್ಷದಲ್ಲಿ ಬಾಕಿ ಸಂಖ್ಯೆ ಹೆಚ್ಚು ಎಂಬುದು ಗಮನಾರ್ಹ ಸಂಗತಿ. ಕೃಷಿ ಸಂಬಂಧಿ ಸಾಲಗಳು ಅನುತ್ಪಾದಕ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಬೆನ್ನಲ್ಲೇ ಸಾಲ ವಸೂಲಿಗೆ ಕಾನೂನಿನಲ್ಲಿ ಬಿಗಿ ಕ್ರಮದ ಅಗತ್ಯತೆಯನ್ನು ಬ್ಯಾಂಕ್‌ಗಳು ಪ್ರತಿಪಾದಿಸಿದ್ದು ರಾಜ್ಯ ಸರ್ಕಾರದ ಮುಂದೆ ಪ್ರಸ್ತಾವನೆ ಮುಂದಿಟ್ಟಿವೆ. ಕೃಷಿ ಸಂಬಂಧಿತ ಸಾಲ ವಸೂಲಿ ವೇಳೆ ರೈತರಿಗೆ ರಕ್ಷಣೆ ನೀಡುವ ಉದ್ದೇಶದಿಂದ ರಾಜ್ಯದಲ್ಲಿ ಕಾನೂನು 46 ವರ್ಷಗಳಿಂದಲೂ ಜಾರಿಯಲ್ಲಿದೆ. 'ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆಗಳು ಮತ್ತು ಇತರ ನಿಬಂಧನೆಗಳು 1974' ಅಡಿಯಲ್ಲಿ ಬ್ಯಾಂಕ್‌ಗಳ ಸಾಲ ವಸೂಲಾತಿ ನಡೆದುಕೊಂಡುಬಂದಿದೆ. ಅದರೆ, ಇದರಲ್ಲಿರುವ ನಿಯಮಗಳು ಸಾಲ ವಸೂಲಾತಿಯನ್ನು ಸಲೀಸು ಮಾಡುತ್ತಿಲ್ಲ, ಬ್ಯಾಂಕಿಂಗ್ ವ್ಯವಸ್ಥೆ ಹಾಳಾಗುತ್ತಿದೆ ಎಂಬುದು ಬ್ಯಾಂಕರ್‌ಗಳ ಕಳವಳವಾಗಿದೆ. ರೈತನೊಬ್ಬ ಕೃಷಿ ಸಾಲ ಬಾಕಿ ಉಳಿಸಿಕೊಂಡು ಅನುತ್ಪಾದಕ ಪಟ್ಟಿಗೆ ಸೇರಿತೆಂದರೆ ಅದನ್ನು ಅಷ್ಟು ಸುಲಭವಾಗಿ ವಸೂಲು ಮಾಡುವ ಅವಕಾಶ ಈಗಿಲ್ಲ. ತನ್ನದೇ ಆದ ಪ್ರಕ್ರಿಯೆ ಇದೆ. ಬ್ಯಾಂಕ್‌ಗಳು ಪ್ರಕ್ರಿಯೆಯಲ್ಲಿ ಕಷ್ಟಪಡುವಂತಾಗಿದೆ, ಇದೇ ಕಾರಣಕ್ಕೆ ಅನುತ್ಪಾದಕ ಸಾಲದ ಸಂಖ್ಯೆ ದೊಡ್ಡದಾಗುತ್ತಿದೆ ಎಂದು ರಾಜ್ಯ ಲೀಡ್ ಬ್ಯಾಂಕ್ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

### ಮುಖ್ಯಾಂಶ

- ರೆಕವರಿ ಸರ್ಟಿಫಿಕೇಟ್ ಬಾಕಿ (2021, ಸೆ.30ರವರೆಗೆ)- 41,951 ಸಾಲದ ಖಾತೆಗಳು ಐ
- ವ್ಯಾಜ್ಯ ಹೂಡಲು ಅವಕಾಶ ಸಿಗದೆ ಪ್ರಕ್ರಿಯೆ ಹಂತದಲ್ಲಿರುವ ಎನ್‌ಪಿಎ- 1,04,966 ಕೋಟಿ ರೂ.
- ಕಳೆದ ಒಂದು ವರ್ಷದಲ್ಲಿ ಬಾಕಿಯಾಗಿರುವ ಪ್ರಕರಣ- 15,949
- ಕಳೆದ ಮೂರು ವರ್ಷದಲ್ಲಿ ಬಾಕಿಯಾಗಿರುವ ಪ್ರಕರಣ- 12,612
- 3ವರ್ಷಕ್ಕಿಂತ ಹೆಚ್ಚಿರುವ ಬಾಕಿ ಪ್ರಕರಣ- 13,390

### ಯಾವ ಸಾಲಗಳು?

**ಭೂ**ಮಿ ಅಭಿವೃದ್ಧಿ, ಕೃಷಿ ಉಪಕರಣ ಖರೀದಿ, ವಾಹನ ಖರೀದಿ ಸೇರಿ ವಿವಿಧ ಉದ್ದೇಶಕ್ಕೆ ಪಡೆದ ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳು.

**ಸಾ**ಲ ವಸೂಲಿಗೆ ಕೇರಳ ಮಾದರಿಯಲ್ಲಿ ಪರಿಣಾಮಕಾರಿ ವ್ಯವಸ್ಥೆ ಆಗಬೇಕಾಗಿದೆ. ಇಲ್ಲವಾದರೆ ಬ್ಯಾಂಕ್‌ಗಳ ಮೇಲೆ ಹೊರೆ ಹೆಚ್ಚಾಗುತ್ತಾ ಹೋಗುತ್ತದೆ. ಕೊಟ್ಟ ಸಾಲದ ಹಣ ಕೂಡ ಜನರದ್ದೇ ಆಗಿರುತ್ತದೆ, ಅದರ ರಕ್ಷಣೆಯೂ ಆಗಬೇಕು.

| ಎಲ್‌ಎಸ್‌ಬಿಸಿ ಹಿರಿಯ ಅಧಿಕಾರಿ

**ಯಾ**ವುದೇ ರೈತ ಸಾಲ ಮರು ಪಾವತಿ ಮಾಡಬಾರದೆಂಬ ಮನಸ್ಥಿತಿಯಲ್ಲಿರಲ್ಲ. ಆದರೆ ರಾಜಕೀಯ ನಾಯಕರ ಸಾಲಮನ್ನಾ ಹೇಳಿಕೆಗಳು ಎನ್‌ಪಿಎಗೆ ಹೆಚ್ಚು ಕಾರಣವಾಗುತ್ತಿವೆ.

| ಮನೋಹರ ಮಸ್ಕಿ ಸಹಕಾರಿ ಧುರೀಣ

**ಪ್ರಶ್ನೆ: ಮಾವಿನ ಬೆಳೆಯಲ್ಲಿ ಬೂದಿ ರೋಗ ನಿಯಂತ್ರಿಸುವುದು ಹೇಗೆ?**

| ರಮೇಶ
ಶ್ರೀನಿವಾಸಪುರ ತಾಲೂಕು

ಉತ್ತರ: ಹೂಗೊಂಚಲು ಹಾಗೂ ಎಲೆಗಳ ಮೇಲೆ ಬೂದಿಯಂತಹ ಬೆಳವಣಿಗೆ ಕಂಡು ಬಂದು ಹೂಗಳು ಉದುರುತ್ತವೆ ಹಾಗೂ ಎಲೆಗಳು ಮುರುಟುತ್ತವೆ. ನಂತರ ಎಳೆಯ ಕಾಯಿ ಉದುರುತ್ತವೆ.

**ನಿರ್ವಹಣೆ:** ಹೂ ಬಿಡುವ ಮುಂಚೆ ಹಾಗೂ ಕಾಯಿ ಕಟ್ಟಿದ ಕೂಡಲೇ 3 ಗ್ರಾಂ ಗಂಧಕ ಅಥವಾ 1 ಗ್ರಾಂ ಟ್ರೈಡಿಮೇಫಾನ್ 50 ಡಬ್ಲ್ಯು.ಪಿ. ಅಥವಾ 1 ಗ್ರಾಂ ಕಾರ್ಬೆನ್ ಡೆಜಿಮ್ 50 ಡಬ್ಲ್ಯು.ಪಿ. ಅಥವಾ 1 ಮಿ.ಲೀ. ಹೆಕ್ಸಾಕೋನೋಜೋಲ್ 5 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪಡಣೆ ಮಾಡಬೇಕು. ಅವಶ್ಯವಿದ್ದಲ್ಲಿ ಇದೇ ಸಿಂಪಡಣೆಯನ್ನು 15 ದಿನಗಳ ನಂತರ ಪುನರಾವರ್ತಿಸಬೇಕು.

| ಪ್ರಿಯಾಂಕಾ ಬಿ.
ಸಸ್ಯರೋಗ ತಜ್ಞರು

## ವಿ ರೈತ ಮಿತ್ರ

**ಪ್ರಶ್ನೆ: ಜಾನುವಾರುಗಳಿಗೆ ವರ್ಷವಿಡೀ ಹಸಿರು ಮೇವು ಪೂರೈಸುವ ಮೇವಿನ ಗಿಡ/ಮರಗಳ ಬಗ್ಗೆ ಮಾಹಿತಿ ನೀಡಿ.**

| ನಾಗರಾಜು ಚೌಡಳ್ಳಿ, ಕೊಳ್ಳೇಗಾಲ ತಾಲೂಕು

| ಗಿಡ / ಮರಗಳು | ಅಂತರ (ಮೀಟರ್) | ಇಳುವರಿ (ಟನ್ ಪ್ರತಿ ಎಕರೆಗೆ) |
|---|---|---|
| ಅಗಸೆ | 2 x 1 | 4.4-5.2 |
| ಹಿಪ್ಪುನೇರಳೆ | 2 x 1 | 8.0-10.0 |
| ಗ್ಲಿರಿಸಿಡಿಯಾ | 2 x 1 | 13.2-14.8 |
| ನುಗ್ಗೆ | 2 x 1 | 4.8-6.0 |
| ಹೆಬ್ಬೇವು | 10 x 5 | 7.2-14.0 |
| ಸುಬಾಬುಲ್ | 2 x 1 | 7.6-8.0 |

ಉತ್ತರ: ಮೇವಿನ ಗಿಡ/ ಮರಗಳು ಹೆಚ್ಚು ಸಸಾರಜನಕ ದಿಂದ ಕೂಡಿದ ಹಸಿರು ಮೇವನ್ನು ಒದಗಿಸುವ ದ್ವಿದಳ ಜಾತಿಯ ಮೇವಿನ ಬೆಳೆಗಳಾಗಿವೆ. ಇವುಗಳು ಬರಗಾಲ ಪರಿಸ್ಥಿತಿಯನ್ನೂ ತಡೆಯುವ ಬಹುವಾರ್ಷಿಕ ಮೇವಿನ ಬೆಳೆಗಳು. ಈ ಗಿಡ/ ಮರಗಳ ಎಲೆ ಮತ್ತು ಎಳೆಯ ರೆಂಬೆಗಳನ್ನು ಹಸಿರು ಮೇವಾಗಿ ಉಪಯೋಗಿಸಬಹುದು. ಇವುಗಳನ್ನು ಕಡಿಮೆ ಫಲವತ್ತಾದ ಭೂಮಿಗಳಲ್ಲಿ, ಬದುಗಳ ಮೇಲೆ, ಇಳಿಜಾರು ಪ್ರದೇಶದಲ್ಲಿ, ವ್ಯವಸಾಯಕ್ಕೆ ಯೋಗ್ಯವಲ್ಲದ ಪ್ರದೇಶಗಳಲ್ಲಿ ಲಾಭದಾಯಕವಾಗಿ ಬೆಳೆಯಬಹುದು.

| ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

**ಪ್ರಶ್ನೆ: ಅಡಿಕೆಯಲ್ಲಿ ಕಾಯಿಗಳ ಉದುರುವಿಕೆಗೆ ಕಾರಣಗಳೇನು? ಇದರ ಸಮಗ್ರ ನಿರ್ವಹಣೆ ಹೇಗೆ?**

| ಅಭಿನಯ್ ತರಿಕೆರೆ ತಾಲೂಕು

ಉತ್ತರ: ಹವಾಮಾನ ವೈಪರೀತ್ಯದಿಂದ ಶಿಲೀಂಧ್ರಗಳ ಉಲ್ಬಣ, ಪೆಂಟಾಟೋಮಿಡ್ ತಿಗಣೆಯ ತೀವ್ರತೆ, ಪೊಟ್ಯಾಷ್/ ಬೋರಾನ್ ಪೋಷಕಾಂಶಗಳ ಕೊರತೆ ಹಾಗೂ ಇತ್ಯಾದಿ ಕಾರಣಗಳಿಂದ ಅಡಿಕೆ ಕಾಯಿಗಳು ಉದುರುವುದನ್ನು ಕಾಣಬಹುದು.

**ಸಮಗ್ರ ನಿರ್ವಹಣೆ:** ಒಣಗಿದ/ಕೊಳೆ ರೋಗದಿಂದ ಉದುರಿದ ಕಾಯಿಗಳನ್ನು ಆಯ್ದು ನಾಶಪಡಿಸಬೇಕು. ಸಮರ್ಪಕ ನೀರಿನ ನಿರ್ವಹಣೆ ಮಾಡಬೇಕು. ಪ್ರತಿ ಮರಕ್ಕೆ 10-12 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರ ಕೊಡಬೇಕು. ಮಣ್ಣು ಪರೀಕ್ಷೆ ಮಾಡಿಸಿ, ಶಿಫಾರಸು ಮಾಡಿದ ಗೊಬ್ಬರದ ಅಸಮತೋಲನೆ ಇದ್ದರೆ (100:40:140 ಸಾ:ರಂ:ಪೊ) ಅಗತ್ಯ ರಸಗೊಬ್ಬರ ನೀಡಿ ಸರಿಪಡಿಸುವುದು ಹಾಗೂ ಮಳೆಗಾಲದ ಆರಂಭದಲ್ಲಿ ಬೋರಾಕ್ಸ್ ಲಘುಪೋಷಕಾಂಶವನ್ನು ಪ್ರತಿ ಗಿಡಕ್ಕೆ 20 ಗ್ರಾಂನಂತೆ ಮಣ್ಣಿನಲ್ಲಿ ಬೆರೆಸಬೇಕು. ಮುಂಗಾರು ಪ್ರಾರಂಭವಾಗುವ ಮೊದಲೇ ಕಾಯಿ ಕೊಳೆ ರೋಗಕ್ಕೆ ಶೇ.1ರ ಬೋರ್ಡೋ ದ್ರಾವಣವನ್ನು ಗೊಂಚಲಿನ ಮೇಲೆ ತಿಂಗಳಿಗೊಮ್ಮೆ ಎರಡ್ಮೂರು ಬಾರಿ ಸಿಂಪಡಣೆ ಮಾಡಬೇಕು. ಪ್ರತಿ ಲೀಟರ್ ನೀರಿಗೆ 3 ಗ್ರಾಂ ಡೈಥೇನ್-ಎಂ-45 ಶಿಲೀಂಧ್ರ ನಾಶಕವನ್ನು 3 ಮಿ.ಲೀ. ಕ್ಲೋರೋಫೈರಿಫಾಸ್ 20 ಇ.ಸಿ. ಅಥವಾ 1.5 ಮಿ.ಲೀ. ಮೊನೊಕ್ರೊಟೋಫಾಸ್ 36 ಎಸ್.ಎಲ್. ಬೆರೆಸಿ ಫೆಬ್ರವರಿ-ಮಾರ್ಚ್ ಅವಧಿಯಲ್ಲಿ ಹೂ ಗೊಂಚಲಿನ ಮೇಲೆ ಸಿಂಪಡಿಸಿದರೆ ಕಾಯಿ ಒಣಗುವ ಮತ್ತು ಪೆಂಟಾಟೋಮಿಡ್ ತಿಗಣೆ ಹತೋಟಿ ಮಾಡಬಹುದು.

| ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು- ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

# ನುಗ್ಗೆಕಾಯಿ ಕೆಜಿಗೆ ₹400!

## ದಾಖಲೆ ದರ | ಗುಜರಾತ್‌ನಿಂದ ಆಮದು

■ ವಿಜಯವಾಣಿ ಸುದ್ದಿಜಾಲ ಚಿಕ್ಕಮಗಳೂರು

ಚಳಿಗೆ ದೇಹ ಬೆಚ್ಚಗಿಡಲು ನುಗ್ಗೆಕಾಯಿ ತಿನ್ನೋಣ ಎಂದು ನೀವು ಮುಂದಾದರೆ ಜೇಬು ಸುಡೋದು ಗ್ಯಾರಂಟಿ! ಏಕೆ ಅಂತೀರಾ... ನುಗ್ಗೆಕಾಯಿ ಕೆ.ಜಿ.ಗೆ ಈಗ ಬರೋಬ್ಬರಿ 400 ರೂ. ಹೌದು, ಅಕಾಲಿಕ ಮಳೆಯಿಂದ ರಾಜ್ಯದಲ್ಲಿ ಬಹುತೇಕ ತರಕಾರಿ ಬೆಳೆಗಳು ಮಣ್ಣುಪಾಲಾಗಿವೆ. ಸೊಪ್ಪು, ತರಕಾರಿ ಬೆಲೆ ನಾಲ್ಕು ಪಟ್ಟು ಏರಿದೆ. ಅದರಲ್ಲೂ ನುಗ್ಗೆಕಾಯಿಗೆ ಭಾರಿ ಬೇಡಿಕೆ ಇದ್ದರೂ ಸ್ಥಳೀಯವಾಗಿ ಬೆಳೆಯೇ ಇಲ್ಲ. ಡಿಸೆಂಬರ್‌ನಲ್ಲಿ ಎಲ್ಲ ಅಂಗಡಿಗಳಲ್ಲಿ ಸಿಗುತ್ತಿದ್ದ ನುಗ್ಗೆಕಾಯಿ ಈಗ ಒಂದೆರಡು ಅಂಗಡಿಗಳಲ್ಲಿ ಮಾತ್ರ ಕಾಣಿಸುತ್ತಿದೆ.

ಕಳೆದ ವರ್ಷ ಈ ಸಂದರ್ಭದಲ್ಲಿ ಕೆಜಿಗೆ 40 ರೂ. ಇದ್ದ ನುಗ್ಗೆಕಾಯಿ ಭಾನುವಾರ 10 ಪಟ್ಟು ಹೆಚ್ಚಾಗಿ ಕೆಜಿಗೆ 400 ರೂ.ಗೆ ಏರಿಕೆಯಾಗಿದೆ. ನುಗ್ಗೆಕಾಯಿ ಸಾಂಬಾರು ತಿನ್ನಲೇಬೇಕೆಂದವರು 120 ರೂ. ಕೊಟ್ಟು 300 ಗ್ರಾಂನಷ್ಟು ಖರೀದಿಸುವ ದೃಶ್ಯ ನಗರದಲ್ಲಿ ಕಂಡುಬಂತು. ಸ್ಥಳೀಯವಾಗಿ ಎಲ್ಲೂ ನುಗ್ಗೆಕಾಯಿ ಸಿಗದೆ ಬಹಳಷ್ಟು ಅಂಗಡಿಯವರು ಹೋಲ್‌ಸೇಲ್ ಮಾರಾಟಗಾರರಿಗೆ ಮುಂಗಡ ಹಣ ಕೊಟ್ಟು ಗುಜರಾತ್‌ನಿಂದ ತರಿಸಿಕೊಳ್ಳುತ್ತಿದ್ದಾರಂತೆ.

ಚಿಕ್ಕಮಗಳೂರಿನ ತರಕಾರಿ ಅಂಗಡಿಯಲ್ಲಿ ನುಗ್ಗೆ ಕಾಯಿ.

**ಮೂವತ್ತೆಂಟು ವರ್ಷದಿಂದ ತರಕಾರಿ ವ್ಯಾಪಾರ ಮಾಡುತ್ತಿದ್ದೇನೆ. ನುಗ್ಗೆಕಾಯಿ ಕೆಜಿಗೆ 400 ರೂ. ಆಗಿದ್ದು ಇದೇ ಮೊದಲು. ಈಗ ಎಲ್ಲೂ ಫಸಲು ಇಲ್ಲದೆ ಬೇಡಿಕೆ ಹೆಚ್ಚಿದ್ದರಿಂದ ಬೆಲೆ ಏರಿಕೆಯಾಗಿದೆ. ಚೆನ್ನೈ, ಮುಂಬೈನಲ್ಲೂ ಕೊರತೆ ಇರುವುದರಿಂದ ಗುಜರಾತ್‌ನಿಂದ ತರಿಸಲಾಗುತ್ತಿದೆ.**

| ಜಾಫರ್ ತರಕಾರಿ ವ್ಯಾಪಾರಿ

13-12-2021 Vv Pg 10

# ರೈತರಿಗಾಗಿ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ

**ಬೆಳಗಾವಿ:** ಎಪಿಎಂಸಿ ಪ್ರಾಂಗಣದಲ್ಲೇ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಬೇಕು ಎಂಬ ಉದ್ದೇಶದಿಂದ ರಾಜ್ಯದಲ್ಲಿ ಎಪಿಎಂಸಿ ಕಾಯ್ದೆ ಜಾರಿಗೆ ತರಲಾಗಿತ್ತು. ರೈತರು ಎಲ್ಲಿ ಬೇಕಾದರೂ ತಮ್ಮ ಬೆಳೆಗಳನ್ನು ಮಾರಬಹುದು ಎಂಬ ಉದ್ದೇಶದಿಂದ ಕಾಯ್ದೆಗೆ ತಿದ್ದುಪಡಿ ತಂದಿದ್ದೇವೆ ಎಂದು ಸಹಕಾರ ಸಚಿವ

ಎಸ್.ಟಿ.ಸೋಮಶೇಖರ್ ಹೇಳಿದರು. ನಗರದ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಎಪಿಎಂಸಿ ಹೊರಗೆ ಮಾರಾಟ ಮಾಡಿದರೆ ದಂಡ ವಿಧಿಸಲಾಗುತ್ತಿತ್ತು ಮತ್ತು ನೋಟಿಸ್ ಕೊಡಲಾಗುತ್ತಿತ್ತು. ಈ ಎರಡನ್ನೂ ತೆಗೆದು ಹಾಕಿದ್ದೇವೆ. ಬೆಳಗಾವಿಯಲ್ಲಿ ಉತ್ಪನ್ನ ಬೆಳೆದವರು ರಾಜ್ಯದ ಯಾವ ಮಾರುಕಟ್ಟೆಯಲ್ಲಿ ಬೇಕಾದರೂ ಮಾರಾಟ ಮಾಡಬಹುದು. ಇದರಿಂದ ಯಾವ ರೈತರಿಗೂ ತೊಂದರೆ ಆಗುವುದಿಲ್ಲ. ಲಾಭದಲ್ಲಿರುವ ಎಪಿಎಂಸಿಗಳನ್ನು ಯಾವ ಕಾರಣಕ್ಕೂ ಮುಚ್ಚುವುದಿಲ್ಲ ಎಂದು ಸ್ಪಷ್ಟಪಡಿಸಿದರು. ವಿರೋಧ ಪಕ್ಷದವರು, ಅಧಿವೇಶನದಲ್ಲಿ ಕೇವಲ ವಿರೋಧವನ್ನಷ್ಟೇ ಮಾಡಬಾರದು. ಸಾರ್ವಜನಿಕರಿಗಿರುವ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕು ಎಂದು ಸಲಹೆ ನೀಡಿದರು.

13-12-2021 Vv Pg 07

# ಭಾರತದಿಂದ ರಫ್ತಾಗುವ ಅಕ್ಕಿ ಬೆಲೆ ಕುಸಿತ

**ನವದೆಹಲಿ:** ಭಾರತದಿಂದ ರಫ್ತಾಗುತ್ತಿರುವ ಅಕ್ಕಿಯ ಬೆಲೆ ಈ ವಾರ ಐದು ವರ್ಷಗಳ ಕನಿಷ್ಠಕ್ಕೆ ಇಳಿದಿದೆ. ರೂಪಾಯಿ ಮೌಲ್ಯ ದುರ್ಬಲವಾಗಿರುವುದು ಮತ್ತು ಸ್ಥಳೀಯವಾಗಿ ಹೊಸ ಅಕ್ಕಿಯ ಉತ್ಪಾದನೆ ಹೆಚ್ಚಳವಾಗಿರುವುದು ಈ ದರ ಇಳಿಕೆ ಕಾರಣ. 2016ರ ಡಿಸೆಂಬರ್ ಬಳಿಕ ಇಷ್ಟು ಇಳಿಕೆಯಾಗಿರುವುದು ಇದೇ ಮೊದಲು. ಭಾರತದ ಮುಂಚೂಣಿ ಅಕ್ಕಿ ರಫ್ತುದಾರರು ಶೇಕಡ 5ರಷ್ಟು ಬ್ರೋಕನ್

ಪಾರ್‌ಬೋಯಿಲ್ಡ್ ಅಕ್ಕಿ ಟನ್‌ಗೆ 351-356 ಡಾಲರ್ ದರ ನಿಗದಿ ಮಾಡಿದ್ದಾರೆ. ಇದಕ್ಕೆ ಹಿಂದಿನ ವಾರ 353-358 ಡಾಲರ್ ಇತ್ತು. ಈ ಬೆಳವಣಿಗೆಯೊಂದಿಗೆ ಭಾರತ ಮತ್ತೆ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಮುನ್ನಡೆದಿದೆ ಎಂದು ಆಂಧ್ರಪ್ರದೇಶದ ಕಾಕಿನಾಡದ ರಫ್ತುದಾರರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ. ವಿಯೆಟ್ನಾಂನಲ್ಲೂ ಶೇಕಡ 5 ಬ್ರೋಕನ್ ರೈಸ್ ದರ ಒಂದು ಟನ್‌ಗೆ 410-414 ಡಾಲರ್ ನಿಗದಿ ಆಗಿದೆ. ಇದು ಹಿಂದಿನ ವಾರ 415 -420 ಡಾಲರ್ ಇತ್ತು.

**ಪಶು ಕಲ್ಯಾಣ ಸಹಾಯವಾಣಿ ಸಾರ್ಥಕತೆ** | **ಕರೆ ಬಂದ 20 ನಿಮಿಷದಲ್ಲಿ ಉಪಚಾರ**

# 5 ತಿಂಗಳಲ್ಲಿ 25 ಸಾವಿರ ಪ್ರಾಣಿಗಳಿಗೆ ಚಿಕಿತ್ಸೆ

■ ವಿಲಾಸ ಮೇಲಗಿರಿ ಬೆಂಗಳೂರು

ಎಮ್ಮೆ, ಹಸುಗಳಿಗಷ್ಟೇ ಅಲ್ಲ, ಕುರಿ, ಮೇಕೆ, ಮೊಲ, ಹಂದಿ, ಕೋಳಿ, ಬೀದಿ ನಾಯಿ, ಬಿಡಾಡಿ ದನಗಳಿಗೂ ಕ್ಷಣಾರ್ಧದಲ್ಲಿ ಉಚಿತ ಚಿಕಿತ್ಸೆ. ಪಕ್ಷಿಗಳು, ಹಾವುಗಳು ಹಾಗೂ ಕಾಡುಪ್ರಾಣಿಗಳಿಗೂ ಚಿಕಿತ್ಸೆ ಉಂಟು!

ಹೌದು, ನೀವು ಒಂದು ಕರೆ ಮಾಡಿದರೆ ಸಾಕು

ಪಶು ವೈದ್ಯಕೀಯ ಸೇವೆ ಲಭ್ಯ. ಪಶುಸಂಗೋಪನಾ ಇಲಾಖೆಯಿಂದ ಪ್ರಾಣಿ ಕಲ್ಯಾಣ ಸಹಾಯವಾಣಿ ಕೇಂದ್ರ ಆರಂಭಿಸಲಾಗಿದ್ದು, ಸುಮಾರು 150 ದಿನದಲ್ಲಿ ಬರೋಬ್ಬರಿ 25,000 ಪ್ರಾಣಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಹೆಬ್ಬಾಳದ ಪಶುಭವನದಲ್ಲಿ ದಿನದ 24 ಗಂಟೆಯೂ ಈ ಪ್ರಾಣಿ ಕಲ್ಯಾಣ ಸಹಾಯವಾಣಿ ಕೇಂದ್ರ ಕಾರ್ಯ ನಿರ್ವಹಿಸುತ್ತದೆ. ದೇಶದಲ್ಲಿಯೇ ಮೊದಲ ಬಾರಿಗೆ ರಾಜ್ಯದಲ್ಲಿ ಆರಂಭಗೊಂಡಿರುವ ಸುಸಜ್ಜಿತ ಪ್ರಾಣಿ ಕಲ್ಯಾಣ ಸಹಾಯವಾಣಿ (ವಾರ್ ರೂಮ್) ಇದಾಗಿದೆ.

**ಗರಿಷ್ಠ-ಕನಿಷ್ಠ ಸಮಯ:** ಗ್ರಾಮೀಣ ಪ್ರದೇಶದಲ್ಲಾದರೆ 20-24 ನಿಮಿಷದಲ್ಲಿ ವೈದ್ಯರು ಘಟನಾ ಸ್ಥಳವನ್ನು ತಲುಪಿ ಚಿಕಿತ್ಸೆ ನೀಡುತ್ತಾರೆ. ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ಹಿನ್ನೆಲೆಯಲ್ಲಿ 1 ಗಂಟೆಯಲ್ಲಿ ನಿರ್ದಿಷ್ಟ ಸ್ಥಳ ತಲುಪುತ್ತಾರೆ. 31 ಜಿಲ್ಲೆಯ ಕೇಂದ್ರೀಕೃತ ಸಹಾಯವಾಣಿ ಇದಾಗಿದ್ದು, ಇಲ್ಲಿಗೆ ಬರುವ ಕರೆಗಳನ್ನು ಘಟನಾ ಸ್ಥಳ ಸಮೀಪದ ಪಶುವೈದ್ಯರಿಗೆ ತಲುಪಿಸಲಾಗುತ್ತದೆ. ನಿರ್ದಿಷ್ಟ ವೈದ್ಯರಿಗೆ ಮಾಹಿತಿ ಮುಟ್ಟಿಸಿ ಡಾಕೆಟ್ ನಂಬರ್ ನೀಡಲಾಗುತ್ತದೆ. ವೈದ್ಯರ ಚಿಕಿತ್ಸೆ ಪೂರ್ಣಗೊಂಡ ಕೂಡಲೇ ಈ ನಂಬರ್ ತೆಗೆಯಲಾಗುತ್ತದೆ. ಹಾಗಾಗಿ ಎಷ್ಟು ಸಮಯದಲ್ಲಿ ಪ್ರಾಣಿಗೆ ಚಿಕಿತ್ಸೆ ನೀಡಲಾಯಿತು ಎಂಬ ಮಾಹಿತಿ ಕರಾರುವಾಕ್ಕಾಗಿ ಸಿಗುತ್ತದೆ.

### ಸಂಪರ್ಕ ಹೇಗೆ?

**ಸಹಾಯವಾಣಿ ಸಂಖ್ಯೆ- 8277100200 ಕರೆ ಮಾಡಿ ಸಮಸ್ಯೆ ತಿಳಿಸಬಹುದು. ವಾಟ್ಸ್ ಆ್ಯಪ್ ಮೂಲಕವೂ ಪ್ರಾಣಿಗೆ ಆಗಿರುವ ಸಮಸ್ಯೆ ಚಿತ್ರ ತೆಗೆದು ಲೊಕೇಷನ್ ಸಮೇತ ರವಾನಿಸಬಹುದು. ಸಮಸ್ಯೆ ಸಣ್ಣದಾಗಿದ್ದರೆ ದೂರವಾಣಿ ಮೂಲಕವೇ ಸಲಹೆ ನೀಡಲಾಗುತ್ತದೆ. ಗಂಭೀರವಾಗಿದ್ದರೆ ಸ್ಥಳಕ್ಕೆ ಭೇಟಿ ನೀಡಿ ಉಪಚರಿಸಲಾಗುತ್ತದೆ.**

**ರೈತರು ಮತ್ತು ಸಾರ್ವಜನಿಕರು ಪ್ರಾಣಿಗಳ ಆರೋಗ್ಯಕ್ಕಾಗಿ ಈ ಸಹಾಯವಾಣಿ ಸಂಪರ್ಕಿಸಬಹುದು. ಇಲಾಖೆಯ ಇತರ ಮಾಹಿತಿಯೂ ಇಲ್ಲಿ ಸಿಗಲಿದೆ.**

| ಪ್ರಭು ಚವ್ಹಾಣ್ ಪಶು ಸಂಗೋಪನಾ ಸಚಿವ

**ಬೆಂಗಳೂರಿನಲ್ಲೇ ಹೆಚ್ಚು:** ಬೆಂಗಳೂರಿನಲ್ಲಿ ಬೀದಿ ನಾಯಿ, ಬಿಡಾಡಿ ದನಕರು, ಸಾಕು ಪ್ರಾಣಿಗಳಾದ ನಾಯಿ, ಮೊಲ, ಪಕ್ಷಿಗಳ ಸಮಸ್ಯೆಗೆ ಸಂಬಂಧಿಸಿ ಹೆಚ್ಚು ಕರೆ ಬರುತ್ತವೆ. ಬೀದರ್, ಕಲಬುರಗಿ, ರಾಯಚೂರು, ಬೆಳಗಾವಿ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಿಂದಲೂ ಸಹಾಯವಾಣಿಗೆ ನಿರಂತರ ಕರೆ ಬರುತ್ತವೆ. ಸಹಾಯವಾಣಿ ಕೇಂದ್ರದಲ್ಲಿ 3 ಪಾಳಿಯಲ್ಲಿ ಒಬ್ಬ ವೈದ್ಯರೂ ಸೇರಿ 6-7 ಸಿಬ್ಬಂದಿ ಇರುತ್ತಾರೆ. ಸಹಾಯವಾಣಿ ಪ್ರಾರಂಭವಾದ ನಂತರ ಪಶುವೈದ್ಯರು 24X7 ಕೆಲಸ ಮಾಡುವ ಅನಿವಾರ್ಯತೆಗೆ ಸಿಲುಕಿದ್ದಾರೆ. ಬಹಳಷ್ಟು ಪಶುವೈದ್ಯರ ಹುದ್ದೆಗಳು ಖಾಲಿ ಇರುವುದರಿಂದ ಕೆಲವರು 2-3 ಸಂಸ್ಥೆಗಳ ಪ್ರಭಾರ ವಹಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಇದರಿಂದ ತೀವ್ರ ಒತ್ತಡಕ್ಕೆ ಅಧಿಕಾರಿಗಳು ಒಳಗಾಗಿದ್ದಾರೆ.

# ಹಣಕಾಸು ನಿರ್ವಹಣೆ, ರೈತರಿಗೆ ಸಲಹೆ

ಮನಿ ₹ ಮಾತು

ಆಪ್ತ ಸಲಹೆ

| ಸಿ.ಎಸ್. ಸುಧೀರ್

ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com

ಒಂದಷ್ಟು ರೈತರು ಉತ್ತಮ ಬೆಳೆ ತೆಗೆದು ಒಳ್ಳೆಯ ಆದಾಯ ಗಳಿಸಿ ನೆಮ್ಮದಿಯಾಗಿದ್ದಾರೆ. ಮತ್ತೊಂದಷ್ಟು ರೈತರು ಸಾಲದ ಶೂಲಕ್ಕೆ ಸಿಲುಕಿ ಒದ್ದಾಡುತ್ತಿದ್ದಾರೆ. ಯಾಕೆ ಹೀಗೆ ಅಂತ ಯೋಚಿಸಿದ್ರೆ ಸಿಗೋ ಉತ್ತರ ಕೆಲ ರೈತರಿಗೆ ಹಣಕಾಸು ನಿರ್ವಹಣೆ ಗೊತ್ತಿದ್ರೆ, ಮತ್ತೆ ಕೆಲವರಿಗೆ ಅದು ತಿಳಿದಿಲ್ಲ. ಹೌದು, ಹಣಕಾಸು ನಿರ್ವಹಣೆ ರೈತರಿಗೂ ಬಹಳ ಮುಖ್ಯ. ಅದನ್ನು ಅರಿತಾಗ ಮಾತ್ರ ಅನ್ನದಾತನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಈ ಹಿನ್ನೆಲೆಯೊಂದಿಗೆ ಹಣಕಾಸು ನಿರ್ವಹಣೆಗೆ ನೇಗಿಲಯೋಗಿ ಹೇಗೆ ಸಜ್ಜಾಗಬೇಕು ಎನ್ನುವ ಮಾಹಿತಿ ಇಲ್ಲಿದೆ.

**ಕೃಷಿ ಹಣಕಾಸು ಮತ್ತು ವೈಯಕ್ತಿಕ ಹಣಕಾಸು ನಿರ್ವಹಣೆ ಪ್ರತ್ಯೇಕಗೊಳಿಸಿ:** ನಮ್ಮ ಬಹುತೇಕ ರೈತರಲ್ಲಿ ಆರ್ಥಿಕ ಶಿಸ್ತು ಕಡಿಮೆ. ಕೃಷಿ ಹಣಕಾಸು ನಿರ್ವಹಣೆ ಮತ್ತು ವೈಯಕ್ತಿಕ ಹಣಕಾಸು ನಿರ್ವಹಣೆಯನ್ನು ಅವರು ಪ್ರತ್ಯೇಕಿಸಿ ನೋಡುವುದೇ ಇಲ್ಲ. ಯಾವುದಾದರೊಂದು ಬೆಳೆಯಲ್ಲಿ ಬಂಪರ್ ಲಾಭ ಬಂದಾಗ ಅದನ್ನು ಉಳಿತಾಯ ಮಾಡಿ ಭವಿಷ್ಯದ ಅಗತ್ಯಗಳಿಗೆ ಇಟ್ಟುಕೊಳ್ಳುವ ಬದಲು ಬಂದಿರುವುದೆಲ್ಲವನ್ನೂ ಅಳತೆ, ಅಂದಾಜಿಲ್ಲದೆ ಖರ್ಚು ಮಾಡಿ, ಮುಂದೊಂದು ದಿನ ಕೈಯಲ್ಲಿ ದುಡ್ಡಿಲ್ಲ ಎಂದು ಕೂತಿರುವ ಉದಾಹರಣೆ ಸಾಕಷ್ಟಿವೆ. ನನಗೆ ಗೊತ್ತಿರುವ ರೈತರೊಬ್ಬರು ಕೆಲ ವರ್ಷಗಳ ಹಿಂದೆ ದೊಡ್ಡ ಪ್ರಮಾಣದಲ್ಲಿ ಈರುಳ್ಳಿ ಬೆಳೆದು, ಒಳ್ಳೆಯ ರೇಟು ಕೂಡ ಸಿಕ್ಕಿದ್ದರಿಂದ ಸುಮಾರು 50 ಲಕ್ಷ ಲಾಭ ಗಳಿಸಿದ್ದರು. ಅಷ್ಟು ಲಾಭ ಸಿಕ್ಕಾಗ ಅವರು ಯಾವುದೇ ಯೋಚನೆ ಮಾಡದೆ ಹೊಸ ಕಾರು ಖರೀದಿಸಿದರು. ಹೊಸ ಮನೆ ಕಟ್ಟಿಸಲು ಉತ್ತಮ ಸ್ಥಿತಿಯಲ್ಲೇ ಇದ್ದ ಹಳೆಯ ಮನೆ ಕೆಡವಿದರು. ಮನೆಯ ನಿರ್ಮಾಣ ಅಂದಾಜು, ಬಂದ ಲಾಭಕ್ಕಿಂದ ಜಾಸ್ತಿ ಆದ ಕಾರಣ ಮತ್ತೆ ಸಾಲ ಮಾಡಿ ಮನೆ ನಿರ್ಮಾಣ ಕಾರ್ಯ ಪೂರ್ಣಗೊಳಿಸಿದರು. ನೀವೇ ಯೋಚನೆ ಮಾಡಿ ಇಲ್ಲಿ ರೈತ ಅಂದಾಜು ಮಾಡಿ ಯೋಜನೆ ರೂಪಿಸಿ ಖರ್ಚು ಮಾಡಿದ್ದರೆ ಯಾವುದೇ ಸಾಲ ಮಾಡುವ ಅಗತ್ಯ ಬೀಳುತ್ತಿರಲಿಲ್ಲ. ಅಷ್ಟು ದೊಡ್ಡ ಕಾರಿನ ಖರ್ಚು ವೆಚ್ಚ ನಿಭಾಯಿಸಲು ಸಾಧ್ಯವೇ? ಹೊಸ ಮನೆ ತುರ್ತು ಅಗತ್ಯವೇ ಎಂದು ಆಲೋಚನೆ ಮಾಡಿದ್ದರೆ ಆತ ಆರ್ಥಿಕ ಮುಗ್ಗಟ್ಟಿಗೆ ಸಿಲುಕುತ್ತಿರಲಿಲ್ಲ. ಅದಕ್ಕೇ ನಾನು ಹೇಳೋದು ರೈತನಿಗೂ ಆರ್ಥಿಕ ಶಿಸ್ತು ಬಹಳ ಮುಖ್ಯ ಅಂತ. ರೈತರು ಹೊಸ ಕಾರು ಖರೀದಿ ಮಾಡಬಾರದು, ಹೊಸ ಮನೆ ಕಟ್ಟಿಸಬಾರದು ಎಂದು ನಾನು ಇಲ್ಲಿ ಹೇಳುತ್ತಿಲ್ಲ. ಬದಲಿಗೆ ಯಾವುದಕ್ಕೆ ಆದ್ಯತೆ ಕೊಡಬೇಕು ಎಂಬ ಚಿಂತನೆ ಅಗತ್ಯ ಎನ್ನುವುದನ್ನು ಮಾತ್ರ ತಿಳಿಯಸಲು ಬಯಸುತ್ತಿದ್ದೇನೆ. ಸರ್ಕಾರಿ ಉದ್ಯೋಗಿಗಳು, ಖಾಸಗಿ ಉದ್ಯೋಗಿಗಳು ಪ್ರತಿ ತಿಂಗಳು ಸಂಬಳ ಪಡೆಯುವ ರೀತಿಯಲ್ಲೇ ರೈತ ತಾನು ಹೊಲ/ತೋಟದಲ್ಲಿ ದುಡಿಯುವುದಕ್ಕೆ ಪ್ರತಿ ತಿಂಗಳು ಇಂತಿಷ್ಟು ಸಂಬಳ ಎಂಬ ನಿಯಮ ಹಾಕಿಕೊಳ್ಳಬೇಕು. ಆ ನಿಯಮದಂತೆ ಸಂಬಳ ತೆಗೆದುಕೊಂಡು ಆ ಹಣದಲ್ಲಿ ಕುಟುಂಬದ ಖರ್ಚುವೆಚ್ಚಗಳನ್ನು ನಿಭಾಯಿಸಬೇಕು. ಆಗ ರೈತರ ಬದುಕು ಹಸನಾಗುತ್ತದೆ. ಕೃಷಿಯಿಂದ ಬಂದ ಲಾಭವನ್ನು ಕೃಷಿ ಪ್ರಗತಿಗೆ ಬಳಸಿದರೆ ವ್ಯವಸಾಯದಲ್ಲಿ ಉನ್ನತಿ ಸಾಧಿಸಲು ಸಾಧ್ಯವಾಗುತ್ತದೆ.

**ರೈತರು ಆದಾಯ ಹೆಚ್ಚಿಸಿಕೊಳ್ಳೋದು ಹೇಗೆ?:** ರೈತರು ಆದಾಯ ಹೆಚ್ಚಿಸಿಕೊಳ್ಳಬೇಕು ಎಂದರೆ ತೋಟದ ಉತ್ಪನ್ನಗಳನ್ನು ಬೆಳೆದು ಮಾರಾಟ ಮಾಡಿದರೆ ಸಾಲದು. ಮೌಲ್ಯವರ್ಧನೆ ಅಂದರೆ ವ್ಯಾಲ್ಯೂ ಅಡಿಷನ್ ಮಾಡಬೇಕು. ಇತ್ತೀಚೆಗೆ ಟೊಮ್ಯಾಟೊ ಬೆಲೆ ಕೆ.ಜಿ.ಗೆ 100 ರೂ. ಆಗಿದ್ದು ನಮಗೆಲ್ಲ ತಿಳಿದಿದೆ. ಆದರೆ, ಅದೇ ಟ್ರೊಮ್ಯಾಟೊ ಕೆಲವು ಸಲ ಕೆ.ಜಿಗೆ. 2-3 ರೂ.ಗೆ ಮಾರಾಟವಾದದ್ದೂ ಇದೆ. ಟ್ರೊಮ್ಯಾಟೊಗೆ ಬೆಲೆ ಹೆಚ್ಚಿಗೆ ಇದ್ದಾಗ ಲಾಭ ಮಾಡಿಕೊಂಡು, ಬೆಲೆ ತೀರಾ ಕಡಿಮೆ ಇದೆ ಅಂದಾಗ ಟೊಮ್ಯಾಟೊ ಪಲ್ಪ್, ಟ್ರೊಮ್ಯಾಟೊ ಸಾಸ್, ಟೊಮ್ಯಾಟೊ ಪೌಡರ್, ಟೊಮ್ಯಾಟೋ ಕೆಚಪ್ ಮಾಡಿ ಹೆಚ್ಚು ಹಣ ಗಳಿಸಬಹುದಲ್ಲವೇ? ಈ ತಂತ್ರಜ್ಞಾನಗಳೆಲ್ಲ ಸುಲಭದಲ್ಲಿ ರೈತರಿಗೆ ಸಿಗುತ್ತವೆಯೇ ಎಂದು ನೀವು ಕೇಳಬಹುದು. ಹೌದು, ಬೆಂಗಳೂರಿನ ಹೆಸರಘಟ್ಟದಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ (ಐಸಿಎಆರ್) ಬಳಿ ಈ ತಂತ್ರಜ್ಞಾನಗಳಿವೆ. ಅವರ ನೆರವು ಪಡೆದು ನೀವು ಇವೆಲ್ಲವನ್ನು ಮಾಡಲು ಸಾಧ್ಯವಿದೆ. ಟೊಮ್ಯಾಟೊ ಒಂದು ಉದಾಹರಣೆ ಅಷ್ಟೇ. ಇದೇ ರೀತಿಯಲ್ಲಿ ಹಲವು ತಂತ್ರಜ್ಞಾನಗಳು ಐಸಿಎಆರ್‌ನಲ್ಲಿ ಲಭ್ಯವಿವೆ. ರೈತರ ಆದಾಯ ಹೆಚ್ಚಳಕ್ಕೆ ಮೌಲ್ಯವರ್ಧನೆ ಒಂದು ಉದಾಹರಣೆ ಅಷ್ಟೇ. ರೈತರು ಮಿಶ್ರ ಕೃಷಿಯನ್ನು ಅಳವಡಿಸಿಕೊಳ್ಳುವುದರಿಂದ, ಕೃಷಿ ಆಧಾರಿತ ಬಿಸಿನೆಸ್‌ಗಳನ್ನು ಕಟ್ಟುವುದರಿಂದ, ಕೃಷಿ ಉಪ ಕಸುಬುಗಳನ್ನು ಮಾಡುವುದರಿಂದ, ಉದ್ಯೋಗದಲ್ಲಿರುವವರು ನಿಯಮಿತವಾಗಿ ಹೂಡಿಕೆ ಮಾಡುವ ರೀತಿಯಲ್ಲೇ ರೈತರೂ ಹಣಕಾಸಿನ ಉತ್ಪನ್ನಗಳಲ್ಲಿ ಹೂಡಿಕೆ ಮಾಡುವುದರಿಂದ ಆದಾಯ ಹೆಚ್ಚಿಸಿಕೊಳ್ಳಬಹುದು. ಇದು ಆಗಬೇಕು ಅಂದ್ರೆ ರೈತ, ತನ್ನದೂ ಒಂದು ಫುಲ್ ಟೈಂ ಉದ್ಯೋಗ ಎಂದು ಭಾವಿಸಿ ಯೋಜಿತವಾಗಿ ಕಾರ್ಯಪ್ರವೃತ್ತನಾಗಬೇಕು ಅಷ್ಟೆ.

## ರೈತರಿಗಾಗಿ ಮಾರ್ಗದರ್ಶನ

**ರೈತರು ಕಡಿಮೆ ಬಡ್ಡಿಗೆ ಸಾಲ ಪಡೆಯವುದು ಹೇಗೆ? ಕಿಸಾನ್ ಕ್ರೆಡಿಟ್ ಕಾರ್ಡ್ ನಿಂದ ಲಾಭ ಪಡೆಯೋದು ಹೇಗೆ? ರೈತರಿಗೆ ಕಡಿಮೆ ಬೆಲೆಯಲ್ಲಿ ಸಿಗುವ ಇನ್ಶೂರೆನ್ಸ್ ಪ್ಲ್ಯಾನ್‌ಗಳು ಯಾವುವು? ರೈತರು ಕೃಷಿ ಖರ್ಚು ಕಡಿಮೆ ಮಾಡೋದು ಹೇಗೆ? ಕೃಷಿ ಜತೆ ಉಪ ಉದ್ಯಮಗಳನ್ನು ರೈತರು ಕಟ್ಟೋದು ಹೇಗೆ? ಹೀಗೆ ರೈತರ ಆದಾಯ ಹೆಚ್ಚಿಸುವ ಹಲವು ಸಲಹೆಗಳನ್ನು ಸಿ.ಎಸ್. ಸುಧೀರ್ ವೈಯಕ್ತಿಕವಾಗಿ ನೀಡಿ, ಮಾರ್ಗದರ್ಶನ ಮಾಡಿದ್ದಾರೆ. ಇನ್ನೇಕೆ ತಡ, ಈಗಲೇ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ಡೌನ್‌ಲೋಡ್ ಮಾಡಿ, ಹಣಕಾಸು ನಿರ್ವಹಣೆ ಕಲಿತು ಯಶಸ್ವಿ ರೈತರಾಗಿ.**

## ಕೋರ್ಸ್‌ನಲ್ಲಿ ಏನಿದೆ?

- ಕೋರ್ಸ್‌ನ ಪರಿಚಯ
- ಕೃಷಿ ಹಣಕಾಸು ನಿರ್ವಹಣೆ ಮತ್ತು ವೈಯಕ್ತಿಕ ಹಣಕಾಸು ನಿರ್ವಹಣೆ
- ಇನ್‌ಪುಟ್ ವೆಚ್ಚ ಕಡಿಮೆ ಮಾಡುವುದು ಹೇಗೆ?
- ಬಂಡವಾಳ ವೆಚ್ಚ ತಗ್ಗಿಸುವುದು ಹೇಗೆ?
- ರೈತರು ಸಾಲದ ಸುಳಿಗೆ ಸಿಲುಕದಿರಲು ಏನು ಮಾಡಬೇಕು?
- ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಕಂಡುಕೊಳ್ಳುವುದು ಹೇಗೆ?
- ರೈತರು ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುವುದು ಹೇಗೆ?
- ರೈತರಿಗೆ ಅತ್ಯುತ್ತಮ ಹೂಡಿಕೆ ಆಯ್ಕೆಗಳು
- ರೈತರು ಪಡೆಯಬೇಕಾದ ಇನ್ಶೂರೆನ್ಸ್ ಪಾಲಿಸಿಗಳು

## ವಿಜಯವಾಣಿ ಓದುಗರಿಗೆ 2,000 ರೂ. ಸ್ಕಾಲರ್‌ಶಿಪ್

**ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ಡೌನ್ ಲೋಡ್ ಮಾಡಿ. VIJAYAVANI ಎಂದು ರೆಫರಲ್ ಕೋಡ್ ಬಳಸಿ, 2,000 ರೂ. ಸ್ಕಾಲರ್‌ಶಿಪ್ ಪಡೆಯಿರಿ.**

# It's avarekai season, but where are the beans?

## *Supply of the city's favourite vegetable is down by about 70% due to heavy rains*

STAFF REPORTER
BENGALURU

Every winter when there's a chill in the air, people look for their fix of avarekai or hyacinth beans. But this year, though it's mid-December – the peak of the avarekai season – the city's favourite beans are not easily found in markets.

"By this time of the year, markets would have been flooded with avarekai and it would have become a staple at home. But not this time. Even those ready to pay a steep price are finding it difficult to find stock," said Asha Kumari, a software engineer from South Bengaluru.

The recent spell of heavy rain has played havoc, causing widespread damage to crops, including avarekai, in the State. "Rains in October and November have led to large-scale crop damage, even before flowering. The best avarekai with *sogadu* is harvested

In view of the poor supply, the price of avarekai is hovering around ₹50-₹60 a kg. ▪ FILE PHOTO

when the beans mature in the mist. But there is almost no crop for that this season. Farmers like myself, who had planted avarekai in Ramanagaram, Kolar, Chickballapur, and Bengaluru Rural districts, have suffered huge losses," said Chennathimmaiah, an avarekai farmer from Magadi.

This in turn has hit supply in the city's markets by an estimated 70%. "The supply of avarekai this year is less than even 30% of the usual when compared with previous years. There is a clear supply and demand mismatch. Despite trying hard, we are not able to procure adequate quantities of avarekai. There is no crop," explained a chief procurement official at a leading chain of grocery stores in the city.

Umesh Mirji, managing director, Horticultural Producers' Cooperative Marketing and Processing Society (HOPCOMS), concurred. By mid-December, the price of a kilo of avarekai usually drops to around ₹20-₹30. But this year, it is still hovering around ₹50-₹60.

Vegetable prices tend to be on the higher side in winter. But the flood of avarekai usually results in less demand for other veggies, which acts as a counter-balance. This year, there is no relief for households. Excessive rains in October and November have caused widespread crop damage to both vegetables and avarekai, causing their prices to skyrocket. The price of at least seven staples such as tomato, beans, knol-khol, and brinjal cost more than ₹100 a kg. "If there was sufficient avarekai in the market it would have automatically ensured that the prices of other vegetables stabilised. But this season seems bad. It will be at least a month – around Sankranti – before the new crop of vegetables is harvested and prices come down," said the procurement official of the grocery chain.

**13-12-2021 Hindu Pg 02**

**13-12-2021 Hd Pg 02**

ಸಿಎಂ ಭರವಸೆಯಿಂದ ಹಸನ್ಮುಖರಾದ ರೈತರು | ಈ ಸಲ ಕಬ್ಬು ಬೆಳೆಗಾರರ ಪ್ರತಿಭಟನೆ ಇಲ್ಲ | ಖಾತೆಗೆ ಜಮೆ

# ಕಬ್ಬು ಬೆಳೆಗಾರರಿಗೆ ಅಧಿವೇಶನದಲ್ಲಿ ಸಿಹಿ!

• ಮಂಜುನಾಥ ಗಂಗಾವತಿ

**ಬೆಳಗಾವಿ:** ಪ್ರತಿ ವರ್ಷ ನಡೆಯುವ ಚಳಿಗಾಲದ ವಿಧಾನ ಮಂಡಲ ಅಧಿವೇಶನದಲ್ಲಿ ಕಬ್ಬು ಬೆಳೆಗಾರರು ಹಾಗೂ ರೈತರ ಪ್ರತಿಭಟನೆ ಬಿಸಿ ಸುವರ್ಣಸೌಧ ತಟ್ಟುತ್ತಿತ್ತು. ಆದರೆ, ಈ ಬಾರಿ ಕಬ್ಬು ಬೆಳೆಗಾರರ ಪ್ರತಿಭಟನೆ ಇಲ್ಲ!

ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಭರವಸೆಯ ಮಾತುಗಳೇ ಕಾರಣ. ಕಬ್ಬು ಬೆಳೆಗಾರರೊಂದಿಗೆ ಮಾತುಕತೆಯಿಂದ ಹಲವು ಸಮಸ್ಯೆ ಬಗೆಹರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕಾರಣದಿಂದಾಗಿ ಕಬ್ಬು ಬೆಳೆಗಾರರು ಅಧಿವೇಶನದಲ್ಲಿ ತಮ್ಮ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟಿಸಲಾಗುತ್ತಿದ್ದನ್ನು ಈ ಸಲ ಕೈಬಿಟಲಾಗಿದೆ. ಇದರಿಂದಾಗಿ ಕೊಂಚ ನಿರಾಳವಾಗಿದೆ.

**ಟನ್ ಕಬ್ಬಿಗೆ 2900 ರೂ. ನಿಗದಿ:** ಪ್ರತಿವರ್ಷ ಬೆಳಗಾವಿ ಸುವರ್ಣಸೌಧದಲ್ಲಿ ನಡೆಯುವ ವಿಧಾನಮಂಡಲ ಅಧಿವೇಶನದ ವೇಳೆ ಕಬ್ಬು ಹಣ ಬಾಕಿ, ಬೆಂಬಲ ನಿಗದಿ ಸೇರಿ ಮುಂತಾದ ಕಾರಣಗಳಿಂದ ಪ್ರತಿಭಟನೆಗಳು ನಡೆಯುತ್ತಿದ್ದವು. ಈ ಬಗ್ಗೆ ಅಧಿವೇಶನದಲ್ಲಿ ಚರ್ಚೆಗಳು ನಡೆಯುತ್ತಿದ್ದವು. ಆದರೆ, ಈ ಬಾರಿ ಸರ್ಕಾರ ಒಂದು ಟನ್‌ಗೆ 2900 ರೂ. ಬೆಂಬಲ ಬೆಲೆ ಘೋಷಿಸಿದ್ದು, ಕಬ್ಬು ಬೆಳೆಗಾರರ ಒಕ್ಕೂಟದ ಮನವಿಯಂತೆ ಪರಿಷ್ಕರಿಸುವ ಭರವಸೆ ನೀಡಿದೆ. ಆದ್ದರಿಂದ ರಾಜ್ಯ ಕಬ್ಬು



ಬೆಳೆಗಾರರ ಸಂಘವು ಪ್ರತಿಭಟನೆ ನಡೆಸದಿರಲು ತೀರ್ಮಾನಿಸಿದೆ.

**ಅಕಾಲಿಕ ಮಳೆ ನಷ್ಟ ಖಾತೆಗೆ ಜಮೆ:** ಕಳೆದ ತಿಂಗಳು ರಾಜ್ಯದಲ್ಲಿ ಬಿದ್ದ ಅಕಾಲಿಕ ಮಳೆಯಿಂದಾದ ಬೆಳೆ ನಷ್ಟವಾಗಿದೆ. ಸರಕಾರ ಜಿಲ್ಲಾಡಳಿತದ ಮೂಲಕ ತ್ವರಿತವಾಗಿ ಸರ್ವೆ ನಡೆಸಿ, ಈಗಾಗಲೇ ಕೆಲ ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ನಷ್ಟಕ್ಕೊಳಗಾದ ರೈತರ ಖಾತೆಗೆ ಹಣ ಜಮೆ ಮಡಲಾಗಿದೆ. ಇದೇ ಮೊದಲು ಅತಿ ವೇಗವಾಗಿ ಪರಿಹಾರ ಕಾರ್ಯ ನಡೆಸಿದ ಸರ್ಕಾರ ಎಂಬ ಹೆಗ್ಗಳಿಕೆ ಬಿಜೆಪಿಗೆ ಸಲ್ಲುತ್ತದೆ. ಬೆಳೆ ಹಾನಿ ಪ್ರದೇಶಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭೇಟಿ ನೀಡಿ ರೈತರಿಗೆ ಭರವಸೆ ನೀಡಿದ್ದರು. ಅದರಂತೆಯೇ ವೇಗವಾಗಿ ಅತಿವೃಷ್ಟಿಯಿಂದಾಗಿರುವ ಬೆಳೆ ನಷ್ಟದ ಸಮೀಕ್ಷೆ ನಡೆಸಿ ಹಣ ಬಿಡುಗಡೆ ಮಾಡಿದ್ದಾರೆ. ಆದ್ದರಿಂದ ಅಧಿವೇಶನಕ್ಕೆ ರೈತರ ಪ್ರತಿಭಟನೆ ಕಾವು ಕಡಿಮೆಯಾಗಲಿದೆ.

**ಎರಡು ಜಿಲ್ಲೆಯಲ್ಲಿ ಶೇ.60 ರಷ್ಟು ಕಬ್ಬು :** ರಾಜ್ಯದಲ್ಲಿ ಶೇ.60 ರಷ್ಟು ಕಬ್ಬನ್ನು ಬಾಗಲಕೋಟೆ ಹಾಗೂ ಬೆಳಗಾವಿ ರೈತರೇ ಬೆಳೆಯುತ್ತಿದ್ದಾರೆ. 67 ಸಕ್ಕರೆ ಕಾರ್ಖಾನೆ ಪೈಕಿ ಶೇ. 50ಕ್ಕೂ ಅಧಿಕ ಕಾರ್ಖಾನೆಗಳು ಎರಡು ಜಿಲ್ಲೆಗಳಲ್ಲಿವೆ. ಪ್ರತಿವರ್ಷವೂ ಕಬ್ಬು ಹಣ ಬಾಕಿ ಉಳಿಸಿಕೊಂಡು ಸರ್ಕಾರಕ್ಕೆ ತಲೆನೋವಾಗುತ್ತಿತ್ತು. ಈ ಬಾರಿ ಇದಕ್ಕೆ ಆಸ್ಪದ ಇಲ್ಲದಂತಾಗಿದೆ.

**“ ಕಬ್ಬು ಬೆಳೆಗೆ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆಯನ್ನು ಈಡೇರಿಸುವ ಭರವಸೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ್ದಾರೆ. ಆದ್ದರಿಂದ ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ವಿಧಾನ ಮಂಡಲ ಅಧಿವೇಶನದಲ್ಲಿ ಕಬ್ಬು ಬೆಳೆಗಾರರು ಪ್ರತಿಭಟನೆ ನಡೆಸುವುದಿಲ್ಲ.**

■ **ಕುರುಬೂರು ಶಾಂತಕುಮಾರ್,** ರಾಜ್ಯಾಧ್ಯಕ್ಷರು, ರಾಜ್ಯ ಕಬ್ಬು ಬೆಳೆಗಾರರ ಸಂಘದ

### ಬಾಕಿ ಹಣ 160 ಕೋಟಿ ರೂ. ಪಾವತಿ

**ಸಕ್ಕರೆ ಕಾರ್ಖಾನೆಗಳು ಕಳೆದ ವರ್ಷ ರೈತರಿಗೆ ಬಾಕಿ ಉಳಿಸಿಕೊಂಡಿದ್ದ 160 ಕೋಟಿ ರೂ. ಹಂತ ಹಂತವಾಗಿ ಪಾವತಿ ಮಾಡುತ್ತಿವೆ. ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಬೆಳಗಾವಿ 0.69 ಕೋಟಿ, ಜಮಖಂಡಿ ಶುಗರ್ಸ್ ಬಾಗಲಕೋಟೆ 1.05 ಕೋಟಿ, ನಿರಾಣಿ ಶುಗರ್ಸ್ 5.67 ಕೋಟಿ, ಸಾಯಿಪ್ರಿಯ ಶುಗರ್ಸ್ 4.15 ಕೋಟಿ, ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ 2.09 ಕೋಟಿ ಹಣ ರೈತರಿಗೆ ಪಾವತಿಸಿವೆ.**

ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಆಗ್ರಹ

# ಬೆಂಬಲ ಬೆಲೆ ಜಾರಿಗೆ ಕಾನೂನಿನ ಬಲ ಬೇಕು

**ವಿಕ ಸುದ್ದಿಲೋಕ** ಬೆಳಗಾವಿ

ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಸಿಗಬೇಕು. ಸರಕಾರ ನಿಗದಿಪಡಿಸಿದ ಬೆಂಬಲ ಬೆಲೆಗಳಿಗಿಂತ ಕಡಿಮೆ ದರದಲ್ಲಿ ಖರೀದಿ ಮಾಡುವವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಆಗ್ರಹಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಕೋವಿಡ್ ಸಮಯದಲ್ಲಿ ರೈತರು ಅನುಭವಿಸಿದ ಬವಣೆಗಳ ಕುರಿತು ನಾವು ಸಮೀಕ್ಷೆ ನಡೆಸಿದ್ದೇವೆ. 1500 ವೃತ್ತಿಪರ ರೈತರ ಅಭಿಪ್ರಾಯ ಆಧರಿಸಿ 108 ಪುಟಗಳ ಸಮಗ್ರ ವಿವರ ಒಳಗೊಂಡ ಸಮೀಕ್ಷಾ ವರದಿಯನ್ನು 2021ರ ಸೆಪ್ಟೆಂಬರ್‌ನಲ್ಲಿ ಸರಕಾರಕ್ಕೆ ಸಲ್ಲಿಸಿದ್ದೇವೆ. ಇದರಲ್ಲಿನ ಪ್ರಸ್ತಾಪಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ರೈತರ ಸಬಲೀಕರಣಕ್ಕಾಗಿ ಸರಕಾರ ಕ್ರಮ ಕೈಗೊಳ್ಳಬೇಕು. ಯಾವುದೇ ಉತ್ಪನ್ನಕ್ಕೆ ನಿಗದಿಪಡಿಸುವ ಬೆಂಬಲ ಬೆಲೆಗೆ ಕಾನೂನಿನ ಸ್ವರೂಪ ನೀಡಬೇಕು. ಕೃಷಿಕರಿಗೆ ವಿವಿಧ ಸೌಲಭ್ಯ ಒದಗಿಸುವ ಇಲಾಖೆಗಳನ್ನು ಜಾಗೃತಗೊಳಿಸಬೇಕು,'' ಎಂದು ಒತ್ತಾಯಿಸಿದರು.

''ಮೊದಲ ಲಾಕ್ ಡೌನ್‌ನಲ್ಲಿ ರೈತರ ಬೆಳೆಗಳು ಸಂಪೂರ್ಣ ಮಾರಾಟವಾಗಿಲ್ಲ. ಸಾಮಾನ್ಯ ದಿನಗಳಿಗಿಂತ ಕಡಿಮೆ ದರ ಸಿಕ್ಕಿದೆ ಎಂದು ಶೇ.70 ರಷ್ಟು ರೈತರು ಸಮೀಕ್ಷೆಯಲ್ಲಿ ತಿಳಿಸಿದ್ದಾರೆ. ಉಳಿದ ವಲಯಗಳಿಗೆ ಹೋಲಿಸಿದರೆ ಕೃಷಿ ವಲಯದ ಬಗ್ಗೆ ಸರಕಾರ ಹೆಚ್ಚಿನ ಗಮನ ಹರಿಸಿಲ್ಲ ಎಂಬುದು ಶೇ.54 ರೈತರ ಅಭಿಪ್ರಾಯವಾಗಿದೆ. ಕೋವಿಡ್ ಪರಿಸ್ಥಿತಿ ಸರಿಯಾಗಿ ನಿಭಾಯಿಸಿಲ್ಲ ಎಂದು ಶೇ.55 ರೈತರು ತಿಳಿಸಿದ್ದಾರೆ. ಕೃಷಿಗೆ ಅಗತ್ಯವಿರುವ ಸಾಲ ಸೌಲಭ್ಯ ಹಾಗೂ ವಿಮೆ ಸೌಲಭ್ಯ ಸಿಕ್ಕಿಲ್ಲ ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ,'' ಎಂದು ಅವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ರವಿಕುಮಾರ ಪೂಣಚ್ಚ, ಮಂಜುನಾಥ ಗದಾಡಿ ಮತ್ತಿತರರು ಉಪಸ್ಥಿತರಿದ್ದರು.

**13-12-2021 Vk Pg 03**

ಮಹಿಳೆಯರು ವಿವಿಧ ಉದ್ಯೋಗಗಳಲ್ಲಿ ಸ್ವಾವಲಂಬನೆ ಬದುಕು ಕಟ್ಟಿಕೊಂಡಿದ್ದಾರೆ. ಆದರೆ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರು ಮಾತ್ರ ಬೆರಳೆಣಿಕೆಯಷ್ಟು. ಇಂಥ ಮಹಿಳೆಯರ ಸಾಲಿನಲ್ಲಿದ್ದಾರೆ ವಿಜಯಪುರದ ಕೃಷ್ಣಾಬಾಯಿ ಶಿವಾಜಿ ಸಾಳುಂಕೆ. ಅಕ್ಷರ ಕಲಿಯದೆ ಇದ್ದರೂ ಕೃಷಿ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

## ಪಶು-ಪಕ್ಷಿಗಳಿಗೂ ಮಮತೆಯ ಕೈತುತ್ತು

# ಕೃಷಿಯಲ್ಲಿ ಕೃಷ್ಣಾಬಾಯಿ ಕಮಾಲ್

**ಶರಣಪ್ಪ ಮರನೂರ**

ವಿಜಯಪುರದಿಂದ ಅಣತಿ ದೂರದ ಅತಾಲಟ್ಟಿ ರಸ್ತೆಯಲ್ಲಿರುವ ಜಮೀನೊಂದರಲ್ಲಿ ಕೃಷ್ಣಾಬಾಯಿ ಶಿವಾಜಿ ಸಾಳುಂಕೆ ಎಂಬ ಮಹಿಳೆಯೊಬ್ಬರು ಬೆನ್ನಿಗೆ ಔಷಧಿ ಪಂಪ್ ಕಟ್ಟಿಕೊಂಡು ಬೆಳೆಗಳಿಗೆ ಔಷಧಿ ಸಿಂಪಡಣೆ ಮಾಡುವ ದೃಶ್ಯ ಕಂಡು ಬರುವುದು ಸಾಮಾನ್ಯ. ಅಷ್ಟೇ ಅಲ್ಲ, ಈ ಮಹಿಳೆ ಬೆಳೆಗಳಿಗೆ ನೀರುಣಿಸುವುದರಿಂದ ಹಿಡಿದು ಎಲ್ಲ ಕೃಷಿ ಕಾರ್ಯಗಳನ್ನು ಮಾಡುತ್ತ ಬೆರಗು ಮೂಡಿಸುತ್ತಾರೆ.

ಸ್ವತಃ ಕೃಷಿ ಕೆಲಸ ಮಾಡುತ್ತ ತಮ್ಮ 4 ಎಕರೆ ಜಮೀನಿನಲ್ಲಿ ಮಿಶ್ರ ಬೇಸಾಯ ಮಾಡಿರುವ ಕೃಷ್ಣಾಬಾಯಿ ಮಾದರಿ ರೈತ ಮಹಿಳೆಯಾಗಿ ಗುರುತಿಸಿಕೊಂಡಿದ್ದಾರೆ. ಇಬ್ಬರು ಗಂಡು ಮಕ್ಕಳು ಕೆಇಬಿ ಸರ್ಕಾರಿ ನೌಕರಿಯಲ್ಲಿದ್ದರೂ ಮಹಿಳೆ ಮಾತ್ರ ಕೃಷಿ ಮಾಡುತ್ತಿರುವುದಷ್ಟೇ ಅಲ್ಲ, ಇಬ್ಬರು ಮಕ್ಕಳ ಸರ್ಕಾರಿ ಸಂಬಳಕ್ಕಿಂತ ಹೆಚ್ಚಿನ ಆದಾಯ ಗಳಿಸುತ್ತಿದ್ದಾರೆ.

### ಜಮೀನು ಅಕ್ಷಯ ಪಾತ್ರೆ

**ಪಶು ಪಕ್ಷಿಗಳಿಗೂ ಇವರ ಜಮೀನು ಒಂದು ರೀತಿಯ ಅಕ್ಷಯಪಾತ್ರೆ. ಪಶು-ಪಕ್ಷಿಗಳು ಗಿಡದಲ್ಲಿರುವ ಹಣ್ಣುಗಳ ಸವಿಯನ್ನು ಸವಿಯಬೇಕು, ಅವುಗಳು ಸಹ ನಮ್ಮಂತೆಯೇ ಜೀವಿಗಳು, ಅವರಿಗೂ ಈ ಭೂಮಿಯಲ್ಲಿ ಪಾಲಿದೆ ಎನ್ನುವುದು ಸಾಳುಂಕೆ ಕುಟುಂಬದ ಭಾವನೆ. ಹೀಗಾಗಿ ಅನೇಕ ಗಿಡಗಳಲ್ಲಿ ಹಣ್ಣುಗಳನ್ನು ಅವರು ಕೀಳುವುದಿಲ್ಲ, ಈ ಎಲ್ಲ ಹಣ್ಣುಗಳನ್ನು ಪಶು-ಪಕ್ಷಿಗಳಿಗೆ ಮೀಸಲಾಗಿಟ್ಟಿದ್ದಾರೆ. ಕೇವಲ ಮಾರಾಟದ ದೃಷ್ಟಿಯಿಂದ ಕೃಷಿ ಮಾಡದೇ ತೋಟದಲ್ಲಿ ರುಚಿಯಾದ ಹಣ್ಣು ಕೊಡುವ ಗಿಡಗಳನ್ನು ನೆಟ್ಟಿದ್ದಾರೆ. ಬಾಳೆ, ಚಿಕ್ಕು, ಪೇರಲ, ಸೀತಾಫಲ ಸೇರಿದಂತೆ ವಿವಿಧ ಹಣ್ಣುಗಳು ಕೇವಲ ಮನೆ ಬಳಕೆ ಹಾಗೂ ಪ್ರಾಣಿ ಪಕ್ಷಿಗಳಿಗಾಗಿ ಬೆಳೆಸಿದ್ದು, ತೋಟಕ್ಕೆ ಬರುವ ಅತಿಥಿಗಳಿಗೆ ನೀಡುತ್ತಾರೆ. ಆದರೆ ಮಾರಾಟ ಮಾತ್ರ ಮಾಡುವುದಿಲ್ಲ ಎಂಬುದು ವಿಶೇಷ.**

### ಬಹುವಾರ್ಷಿಕ ಬೆಳೆಗೆ ಆದ್ಯತೆ...

ನಾಲ್ಕು ಎಕರೆ ಜಮೀನಿನಲ್ಲಿ 600 ಮಾಹಾಘನಿ ಗಿಡ, 200 ಸಾಗುವಾನಿ, 50 ರಕ್ತ ಚಂದನ ಗಿಡಗಳನ್ನು ನಡೆಲಾಗಿದೆ. ಕೇವಲ ಒಂದೇ ವರ್ಷದಲ್ಲಿ 10ರಿಂದ 12 ಫೂಟ್ ಎತ್ತರಕ್ಕೆ ಬೆಳೆದಿವೆ. ಇಷ್ಟು ಹುಲುಸಾಗಿ ಬೆಳೆಸಲು ಕೃಷ್ಣಾಬಾಯಿ ಬಳಸಿದ್ದು ಸಾವಯವ ಗೊಬ್ಬರ. ಈ ಗಿಡಗಳು ಆದಾಯ ಕೊಡಬೇಕಾದರೆ 10 ರಿಂದ 15 ವರ್ಷಗಳೇ ಬೇಕಾಗುತ್ತದೆ. ಹಾಗಾಗಿ ಇವುಗಳ ಮಧ್ಯ ಮಿಶ್ರ ಬೆಳೆಯಾಗಿ ಗೋಧಿ, ಜೋಳ, ಶೇಂಗಾ, ಸಜ್ಜೆ ಅಷ್ಟೇ ಅಲ್ಲ ಅನೇಕ ತರಕಾರಿ ಗಿಡಗಳನ್ನು ನೆಟ್ಟು ಆದಾಯಕ್ಕೆ ಯಾವುದೇ ಕೊರತೆಯಾಗದಂತೆ ಕೃಷಿ ಮಾಡುತ್ತಿದ್ದಾರೆ.

### ಪಶು ಸಂಗೋಪನೆಗೂ ಒತ್ತು...

ಸಾವಯವ ಕೃಷಿಗೆ ಪೂರಕವೆಂಬಂತೆ ಸುಮಾರು 20 ಕುರಿ, ಎರಡು ಆಕಳು, 4 ಎಮ್ಮೆ, ಗಿರಿರಾಜ, ಕಕ್ಕೇರಿ, ಜವಾರಿ ತಳಿಯ 150ಕ್ಕೂ ಹೆಚ್ಚು ಕೋಳಿಯನ್ನು ಕೃಷ್ಣಾಬಾಯಿ ಸಾಕಾಣಿಕೆ ಮಾಡುತ್ತಿದ್ದಾರೆ. ಕೋಳಿ ಮೊಟ್ಟೆ ಮಾರಾಟದಿಂದ ತಿಂಗಳಿಗೆ ಸುಮಾರು 8000 ರೂ., ಹೈನುಗಾರಿಕೆಯಿಂದ 7000 ರೂ., 70ಕ್ಕೂ ಹೆಚ್ಚು ತೆಂಗಿನ ಗಿಡಗಳಿಂದ ಸಾವಿರಾರು ರೂ. ಆದಾಯ ಗಳಿಸುತ್ತಿದ್ದಾರೆ.

> ಕೃಷಿ ಕಾಯಕ ಪುರುಷರೇ ಮಾಡಬೇಕು ಎಂಬ ನಿಯಮವೇನು ಇಲ್ಲ. ಮಹಿಳೆಯರು ಸಹಿತ ಕೃಷಿಯಲ್ಲಿ ಆದಾಯ ಗಳಿಸಬಹುದು. ಆಸಕ್ತಿಯಿಂದ ಮಾಡಬೇಕು. ನಾವು ಹಣ್ಣುಗಳನ್ನು ಮಾರಾಟ ಮಾಡುವುದಿಲ್ಲ. ಮನೆಗೆ ಎಷ್ಟು ಬೇಕೋ ಅಷ್ಟು ತೆಗೆದುಕೊಂಡು ಉಳಿದವುಗಳನ್ನು ಪ್ರಾಣಿ ಪಕ್ಷಿಗಳಿಗೆ ಬಿಟ್ಟು ಬಿಡುತ್ತೇವೆ. ಹಾಗಾಗಿಯೇ ನಮ್ಮ ತೋಟಕ್ಕೆ ನೀರಿನ ಕೊರತೆಯಾಗುವುದಿಲ್ಲ. ಪ್ರಾಣಿ-ಪಕ್ಷಿಗಳ ಪುಣ್ಯ ತೋಟದ ಮೇಲಿದೆ.
>
> **ಕೃಷ್ಣಾಬಾಯಿ ಸಾಳುಂಕೆ** | ಕೃಷಿ ಮಹಿಳೆ

### ನೀರಿನ ಸಮರ್ಪಕ ಬಳಕೆ

ಜಮೀನಿನಲ್ಲಿನ ಎರಡು ಬೋರ್‌ವೆಲ್‌ಗಳಿಂದ ಹೊಂಡದಲ್ಲಿ ನೀರು ಸಂಗ್ರಹಿಸಿ ಕೃಷಿಗೆ ಬಳಕೆ ಮಾಡುವ ಇವರು ನೀರಿನ ಕೊರತೆ ಅನುಭವಿಸಿಲ್ಲ.

ಬೇಸಿಗೆ ಬಿಸಿಲಿಗೆ ಸುತ್ತಮುತ್ತಲಿನ ರೈತರ ಬೋರ್‌ವೆಲ್‌ಗಳು ಬತ್ತಿ ಹೋಗುತ್ತವೆ. ಆದರೆ ಇಷ್ಟೆಲ್ಲ ನೀರಿನ ಬಳಕೆ ಮಾಡಿದರೂ ಕೃಷ್ಣಾಬಾಯಿ ತೋಟದಲ್ಲಿ ನೀರಿನ ಕೊರತೆ ಇಲ್ಲ.

**13-12-2021 Sk Pg 08**

For more information visit University Library Website
Web - uasbagrilibindia.org
E-mail- librarian@uasbangalore.edu.in